**<u>3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ.</u>**

**<u>ಎಸ್.ಸಿ. ಸಂಖ್ಯೆ: 04/2020</u>**

ದಿನಾಂಕ: 09.12.2021
(ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು)

ಚಾಸಾ - 4 ಪ್ರಾಸಾ - 4

| | | |
|---|---|---|
| ಹೆಸರು | : | ಬಸವರಾಜು |
| ತಂದೆಯ/ಗಂಡನ ಹೆಸರು | : | ಗಿರಿಯಪ್ಪ |
| ವಯಸ್ಸು | : | 48 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಬಿದನಪಾಳ್ಯ |

**<u>ಮುಖ್ಯವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ:</u>**

ನನಗೆ ನ್ಯಾಯಾಲಯದ ಮುಂದಿರುವ ಆರೋಪಿಗಳು ಗೊತ್ತಿರುತ್ತಾರೆ. ಸಾಕ್ಷಿಗಳಾದ ಪ್ರಾಸಾ 1 ರಿಂದ 3 ಗೊತ್ತಿರುತ್ತಾರೆ. ಮೃತೆ ಗಂಗಹನುಮಕ್ಕ ಗೊತ್ತಿದ್ದರು.

2. ಆದರೆ ಮೃತ ಗಂಗಹನುಮಕ್ಕನ ಸಾವಿನ ಕಾರಣದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನಾನು ಆರೋಪಿಗಳ ವಿರುದ್ಧ ಅವರುಗಳನ್ನು ಗಂಗಮ್ಮನ ನಿಧನದ ನಿಕಟಪೂರ್ವದಲ್ಲಿ ನೋಡಿದೆ ಎಂದು ನಮೂದಿಸಿ ಹೇಳಿಕೆ ನೀಡಿರುವುದಿಲ್ಲ. ಈಗ ನನಗೆ ತೋರಿಸಿದ ರುಜುವನ್ನು ಪೊಲೀಸ್ ಠಾಣೆಯಲ್ಲಿ ಮಾಡಿದ್ದೇನೆ.

3. ಪ್ರಶ್ನಿಸಿದಂತೆ ನನ್ನ ಸಮಕ್ಷಮ ಆರೋಪಿತರ ಸೂಚನೆಯ ಮೇರೆಗೆ ಯಾವುದೇ ಸ್ಥಳದಲ್ಲಿ ಮಹಜರ್ ಕ್ರಮ ಜರುಗಿಸಿಲ್ಲ. ನಾನು

ಯಾವುದೇ ಮಹಜರ್ ನಡವಳಿಕೆಯಲ್ಲಿ ಪಾಲ್ಗೊಂಡಿಲ್ಲ. ನನ್ನ ಸಮಕ್ಷಮ ಆರೋಪಿಗಳ ಸೂಚನೆಯ ಮೇರೆಗೆ ಪ್ರಶ್ನಿಸಿದಂತೆ ಯಾವುದೇ ವಸ್ತುಗಳನ್ನು ಪೊಲೀಸರು ಅಮಾನತು ಕ್ರಮಕ್ಕೆ ಒಳಪಡಿಸಿಲ್ಲ.

4. ನನ್ನ ರುಜುಗಳಿರುವ ಎರಡು ದಾಖಲಾತಿಗಳನ್ನು ಈಗ ನಿಶಾನೆ ಪಿ 5 (ಕೃತ್ಯ ಸ್ಥಳದ ಪಂಚನಾಮೆ) ಮತ್ತು 6 (ಕೃತ್ಯಕ್ಕೆ ಸಂಬಂಧಪಟ್ಟ ವಸ್ತುಗಳನ್ನು ವಶಕ್ಕೆ ಪಡೆದ ಸ್ಥಳದ ಪಂಚನಾಮೆ) ಎಂದು ಗುರುತಿಸಲಾಗಿದ್ದು, ಸದರಿ ದಾಖಲೆಗಳಲ್ಲಿ ನನ್ನ ರುಜುಗಳನ್ನು ನಿಶಾನೆ ಪಿ 5(ಎ) ಮತ್ತು ನಿಶಾನೆ ಪಿ 6(ಎ) ಎಂದು ಗುರುತು ಮಾಡಲಾಯಿತು.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀಸವಾಲು ಮಾಡಲು ಅಭಿಯೋಜಕರು ಕೋರಿದ್ದಾರೆ, ಪರಿಶೀಲಿಸಿದೆ. ಈ ಸಾಕ್ಷಿಯ ಸಾಕ್ಷ್ಯವು ತನಿಖಾಧಿಕಾರಿ ಸಂಗ್ರಹಿಸಿದ ಸಾಕ್ಷ್ಯಕ್ಕೆ ವಿರುದ್ಧವಾಗಿ ಕಂಡುಬಂದಿದೆ. ಈ ಕಾರಣಕ್ಕಾಗಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸುವುದು ನ್ಯಾಯಸಮ್ಮತವಾಗಿದೆ. ಈ ಕಾರಣಕ್ಕಾಗಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅಭಿಯೋಜಕರಿಗೆ ಅನುಮತಿ ನೀಡಲಾಗಿದೆ)

**<u>ಪಾಟೀ ಸವಾಲುಃ ಮಾನ್ಯ ಅಭಿಯೋಜಕರಿಂದಃ</u>**

5. ದಿನಾಂಕ 19.09.2019 ರಂದು ಪೊಲೀಸರಿಗೆ ಮಾಹಿತಿ ನೀಡಿ ನನ್ನ ಹೇಳಿಕೆಯಲ್ಲಿ "ದಿನಾಂಕ 14.09.2019 ರಂದು ಸಂಜೆ ಸುಮಾರು 6.30 ರಿಂದ 7 ಗಂಟೆ ಸಮಯದಲ್ಲಿ ನಮ್ಮ ಊರಿನ ಆಂಜನಪ್ಪನವರ ಜಮೀನು ಕಡೆಯಿಂದ 2 ನೇ ಆರೋಪಿ ಲಕ್ಷ್ಮಣಪ್ಪನವರ ಮನೆಗೆ ಹೋಗಿ ತಾನು ಧರಿಸಿದ್ದ ಬಟ್ಟೆಯನ್ನು ಬದಲಿಸಿ, ಪುನಃ ಕಾಟನ್‌ಪಾಳ್ಯದ ಕಡೆ ಹೋಗುತ್ತಿದ್ದು, ಆ ಕಾಲಕ್ಕೆ ನಾನು ಅವರುಗಳನ್ನು ಪ್ರಶ್ನಿಸಲಾಗಿ, ಅವರುಗಳು ತುರ್ತು ಹೋಗಬೇಕೆಂದು

ಹೊರಟು ಹೋಗಿರುತ್ತಾರೆ" ಎಂದು ನಮೂದಿಸಿ ಈಗ ನನಗೆ ಓದಿ ಹೇಳಿದಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಒಪ್ಪದ ಹೇಳಿಕೆಯನ್ನು ಈಗ ನಿಶಾನೆ ಪಿ 7 ಎಂದು ಗುರುತು ಮಾಡಲಾಯಿತು.

6. ದಿನಾಂಕ 21.09.2019 ರಂದು ಪೊಲೀಸರಿಗೆ ಮತ್ತೊಂದು ಹೇಳಿಕೆ ನೀಡಬೇಕಾದರೆ "ಈ ದಿನ ದಿನಾಂಕ 21.09.2019 ರಂದು ಪೊಲೀಸರು ನಮ್ಮ ಊರಿಗೆ ಇಲಾಖಾ ಜೀಪಿನಲ್ಲಿ ಆರೋಪಿಗಳನ್ನು ಕರೆತಂದಿದ್ದು, ಆರೋಪಿಗಳು ಸೂಚಿಸಿದಂತೆ ಪೊಲೀಸರು ನನ್ನನ್ನು ಪಂಚರನ್ನಾಗಿ ಬರಮಾಡಿಕೊಂಡು ಆರೋಪಿಗಳ ಸೂಚನೆಯ ಮೇರೆಗೆ ಪ್ರಕರಣಕ್ಕೆ ಸಂಬಂಧಪಟ್ಟ ಕೆಲವು ವಸ್ತುಗಳನ್ನು ವಶಕ್ಕೆ ಪಡೆಯುವುದಾಗಿ ನುಡಿದಿದ್ದು, ಪರಿಣಾಮ ನಾನು ಪಂಚಸಾಕ್ಷಿಯಾಗಿ ಭಾಗವಹಿಸಲು ಒಪ್ಪಿದ್ದು, ನಂತರ ನನ್ನನ್ನು ಹಾಗು ಪೊಲೀಸರನ್ನು ಕೃತ್ಯದ ಸ್ಥಳವಾದ ನಮ್ಮ ಊರಿನ ಆಂಜನಪ್ಪ ನವರ ಜಮೀನ ಹಳ್ಳದ ಸಮೀಪ ಕರೆದುಕೊಂಡು ಹೋಗಿದ್ದು, ಸದರಿ ಸ್ಥಳವನ್ನು ತೋರಿಸಿ, ಸದರಿ ಸ್ಥಳದಿಂದ ಕಾಡು ಜಾತಿಯ ಒಂದು ಕಲ್ಲು, ಮೂರು ಬೆರಳು ಗಾತ್ರದ ಕಾಡು ಜಾತಿಯ ಕಡ್ಡಿಗಳು ಹಾಗು ಒಂದು ಕಪ್ಪು ಬಣ್ಣದ ಒಂದು ಚಪ್ಪಲಿಯನ್ನು ಸದರಿ ಸ್ಥಳದಲ್ಲಿ ತೋರಿಸಿ ಆ ವಸ್ತುಗಳನ್ನು ಪೊಲೀಸರು ನನ್ನ ಸಮಕ್ಷಮ ವಿವರವಾದ ಪಂಚನಾಮೆಯೊಂದಿಗೆ ಅಮಾನತು

ಕ್ರಮಕ್ಕ ಒಳಪಡಿಸಿರುತ್ತಾರೆ ಮತ್ತು ನಾನು ಅಮಾನತು ಮಹಜರ್‌ಗೆ ರುಜು ಮಾಡಿರುತ್ತೇನೆ" ಎಂದರೆ ಸರಿಯಲ್ಲ.

7. ಸದರಿ ದಿನದಂದೇ ಆರೋಪಿತರು ನನ್ನನ್ನು ಮತ್ತು ತನಿಖಾಧಿಕಾರಿಗಳನ್ನು ನಮ್ಮ ಪಕ್ಕದ ಊರಾದ ಬಿದನಹಳ್ಳಿ ಗ್ರಾಮದಲ್ಲಿದ್ದ 2ನೇ ಆರೋಪಿಯ ಮನೆಯ ಜಾಗಕ್ಕೆ ಕರೆದುಕೊಂಡು ಹೋಗಿದ್ದು, ಸದರಿ ಮನೆಯಿಂದ 2ನೇ ಆರೋಪಿಯು ಪ್ಲಾಸ್ಟಿಕ್ ಚೀಲದಲ್ಲಿ ಇರಿಸಲಾಗಿದ್ದ ಮತ್ತು 1ನೇ ಆರೋಪಿಗೆ ಸಂಬಂಧಿಸಿದ ಬಟ್ಟೆಗಳು ಎನ್ನಲಾದ ಬಟ್ಟೆಗಳನ್ನು ಅಂದರೆ ಷರ್ಟ್ ಮತ್ತು ಪ್ಯಾಂಟ್‌ನ್ನು ಪ್ಲಾಸ್ಟಿಕ್ ಚೀಲ ಸಮೇತ ತಂದು ತನಿಖಾಧಿಕಾರಿಗಳಿಗೆ ನೀಡಿದ್ದು, ತನಿಖಾಧಿಕಾರಿಗಳು ಬರವಣಿಗೆ ಮಾಡಿ ಮಹಜರ್ ಕ್ರಮವನ್ನು ನಿಶಾನೆ ಪಿ 6 ರಂತೆ ಅಮಾನತು ಪಂಚನಾಮೆಯನ್ನು ಜರುಗಿಸಿದ್ದು, ಅದಕ್ಕೂ ನಾನು ರುಜು ಮಾಡಿರುತ್ತೇನೆ ಎಂದರೆ ಸರಿಯಲ್ಲ.

8. ಅದೇ ದಿನದಂದು, ನಿಶಾನೆ ಪಿ 5 ಮತ್ತು 6 ರ ಸಂಗತಿಗಳನ್ನು ನಮೂದಿಸಿ ನಾನು ವಿವರವಾದ ಹೇಳಿಕೆಯನ್ನು ಈಗ ನನಗೆ ಓದಿ ಹೇಳಿದ ದಾಖಲೆಯಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಒಪ್ಪದ ಹೇಳಿಕೆಯನ್ನು ಈಗ ನಿಶಾನೆ ಪಿ 8 ಎಂದು ಗುರುತು ಮಾಡಲಾಯಿತು.

9. ಆರೋಪಿಗಳು ನಮ್ಮ ಊರಿನವರೇ ಆದ್ದರಿಂದ, ಅವರಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷ್ಯವನ್ನು ನುಡಿದಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ</u> ಶ್ರೀ.ಕೆ.ವಿ.ಕೆ. ವಕೀಲರಿಂದ – ಆರೋಪಿಗಳ ಪರವಾಗಿಃ- ಇರುವುದಿಲ್ಲ.**

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಸಿದ್ದಲಿಂಗ ಪ್ರಭು)
3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.